**ದಿನಾಂಕಃ 23.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ  ವಕೀಲರಿಂದಃ–**

ನಾನು ಈ ಪ್ರಕರಣದಲ್ಲಿ 1 ನೇ ಅರ್ಜಿದಾರರಾಗಿರುತ್ತೇನೆ. ನನ್ನ ಮೌಖಿಕ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿರುವ ಅಂಶವನ್ನು ನಾನೇ ಹೇಳಿ ಬರೆಸಿ ಸಹಿ ಹಾಕಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ. ನಾನು ಉಳಿದ ಅರ್ಜಿದಾರರ ಪರವಾಗಿಯೂ ಸಹ ಸಾಕ್ಷಿ ನುಡಿಯುತ್ತಿದ್ದೇನೆ.

ಈ ದಿನ ನಾನು ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ನನ್ನ ಪರವಾಗಿ ನಿಶಾನೆಗೊಳಿಸಬೇಕೆಂದು ನಿವೇದಿಸಿಕೊಳ್ಳುತ್ತೇನೆ.

| **ಕ್ರ.ಸಂಖ್ಯೆ** | **ದಾಖಲೆಗಳ ವಿವರ** | **ನಿಶಾನೆಗಳು** |
|---|---|---|
| 1. | ದಿನಾಂಕಃ 01.01.2026 ರ ಅಲಭ್ಯ ಪ್ರಮಾಣ ಪತ್ರ | ನಿ.ಪಿ–1 |
| 2. | ಗ್ರಾಮ ಲೆಕ್ಕಾಧಿಕಾರಿ ವರದಿ | ನಿ.ಪಿ–2 |
| 3. | ಗ್ರಾಮ ಮಹಜರ್ | ನಿ.ಪಿ–3 |
| 4. | ರಾಜಸ್ವ ನಿರೀಕ್ಷಕರ ವರದಿ | ನಿ.ಪಿ–4 |
| 5. | ವಂಶವೃಕ್ಷ ಪ್ರಮಾಣ ಪತ್ರ | ನಿ.ಪಿ–5 |
| 6. | ನನ್ನ ಆಧಾರ್ ಕಾರ್ಡ್ ನೋಟರೀಕೃತ ಪ್ರತಿ | ನಿ.ಪಿ–6 |
| | ರಂಗಮ್ಮನವರ ಚುನಾವಣಾ ಗುರುತಿನ ಚೀಟಿಯ ನೋಟರೀಕೃತ ಪ್ರತಿ | ನಿ.ಪಿ–7 |
| 7. | ದಿನಾಂಕಃ 20.01.2026 ರ ಟೈಮ್ಸ್ ಆಫ್ ಕರ್ನಾಟಕ ಕನ್ನಡ ದಿನಪತ್ರಿಕೆ<br>ಪತ್ರಿಕೆಯಲ್ಲಿ ಪ್ರಕಟವಾದ ಭಾಗ | ನಿ.ಪಿ–8<br>ನಿ.ಪಿ–8(ಎ) |
| 8. | ದಿನಾಂಕಃ 20.01.2026 ರ ಕರುನಾಡ ಸುದ್ದಿ ಕನ್ನಡ ದಿನಪತ್ರಿಕೆ<br>ಪತ್ರಿಕೆಯಲ್ಲಿ ಪ್ರಕಟವಾದ ಭಾಗ | ನಿ.ಪಿ–9<br>ನಿ.ಪಿ–9(ಎ) |

**ಪಾಟೀ ಸವಾಲುಃ ಎದುರುದಾರರು ಗೈರು ಹಾಜರಾಗಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.